**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5022/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಎಂ. ಶಿವಮಾದಯ್ಯ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಮಾದಯ್ಯ | **15.07.2026** |
| **ವಯಸ್ಸು** | : | 55 ವರ್ಷ | |
| **ವೃತ್ತಿ** | : | ವೃತ್ತ ನೀರಿಕ್ಷಕರು, ಹುಣಸೂರು | **ಪ್ರಾ.ಸಾಃ 24** |
| **ವಾಸ ಸ್ಥಳ** | : | ಹುಣಸೂರು | **ಚಾ.ಸಾಃ 46** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ದಿಃ 30.01.2024 ರಿಂದ ದಿಃ 12.05.2026 ಆರಕ್ಷಕ ವೃತ್ತ ನೀರಿಕ್ಷರಾಗಿ ಕೊಳ್ಳೇಗಾಲ ವೃತ್ತದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 05.03.2025 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ 45 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ.

ದಿಃ 06.03.2025 ರಂದು ಪಂಚರಾಗಿ ಚಾಸಾ 15, 17 ಮತ್ತು 18 ರವರನ್ನು ಕಚೇರಿಗೆ ಬರಮಾಡಿಕೊಂಡು ಅವರಿಗೆ ವಿದ್ಯಮಾನ ತಿಳಿಸಿ, ಅವರನ್ನು ಮೈಸೂರಿನ ಕೆ.ಆರ್ ಆಸ್ಪತ್ರೆಯ ಶವಗಾರಕ್ಕೆ ಕರೆದುಕೊಂಡು ಹೋಗಿ ಅವರುಗಳ ಸಮಕ್ಷಮ ಮದ್ಯಾಹ್ನ 1.45 ರಿಂದ 4.00 ಗಂಟೆಯವರೆಗೆ ಮೃತ ಪುನೀತ್

ಎಂಬುವರರ ಶವ ಪಂಚನಾಮೆಯನ್ನು ನೇರವೇರಿಸಿರುತ್ತೇನೆ. ಶವ ಪಂಚನಾಮೆಯ ಸಮಯದಲ್ಲಿ ಮೃತನ ಹೊಟ್ಟೆಯ ಮಧ್ಯಭಾಗದಲ್ಲಿ ಗಾಯವಾಗಿದ್ದು, ಆಸ್ಪತ್ರೆಯಿಂದ ಬ್ಯಾಂಡೆಜ ಹಾಕಿರುತ್ತಾರೆ. ಮೃತನ ಮರ್ಮಾಂಗದಬಲ ತತೊಡೆಯ ಬಳಿ ಆಸ್ಪತ್ರೆಯಿಂದ ಬ್ಯಾಂಡೆಜ ಹಾಕಿರುತ್ತಾರೆ. ಮೃತನ ಎಡ ಮುಂಗೈ ಮೇಲೆ ಗ್ಲೂಕೋಸ್ ನೀಡಲು ಡ್ರಿಪ್ ಅಳವಡಿಸಿರುತ್ತಾರೆ. ಮೃತನ ಮೈ ಮೇಲೆ ಆಸ್ಪತ್ರೆಯ ಬಟ್ಟೆ ಮಾತ್ರ ಇರುತ್ತದೆ. ಶವ ಪಂಚನಾವೆಯನ್ನು ನಿಪಿ 18 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 18(ಡಿ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಸಮಯದಲ್ಲಿ ಚಾಸಾ 19 ಮತ್ತು 20 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಶವಪಂಚನಾಮೆಯ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಭಾವಚಿತ್ರಗಳನ್ನು ನಿಪಿ 19 ರಿಂದ 24 ಎಂದು ಈಗಾಗಲೇ ಗುರುತಿಸಲಾಗಿದೆ. ನಂತರ ಮೃತ ದೇಹವನ್ನು ಚಾಸಾ 19 ರವರಿಗೆ ಹಸ್ತಾಂತರಿಸಿರುತ್ತೇನೆ.

ದಿಃ 07.03.2025 ರಂದು ಚಾಸಾ 32 ಮತ್ತು 33 ರವರು ಆರೋಪಿಯು ಕೃತ್ಯಕ್ಕೆ ಬಳಿಸಿದ ದ್ವಿ ಚಕ್ರ ವಾಹನವನ್ನು ಹಾಜರುಪಿಡಿಸಿದ್ದು, ಪಂಚರಾದ ಚಾಸಾ 15 ಮತ್ತು 16 ರವ ಸಮಕ್ಷಮ ಸದರಿ ಮೋಟಾರ್ ಸೈಕಲ್ ಅನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಮಹಜರ್ ಅನ್ನು ನಿಪಿ 08 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 8(ಡಿ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ದ್ವಿ ಚಕ್ರ ವಾಹನದ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಭಾವಚಿತ್ರಗಳನ್ನು ನಿಪಿ 09 ಎಂದು 10 ಎಂದು ಈಗಾಗಲೇ ಗುರುತಿಸಲಾಗಿದೆ. ಮಹಜರ ಸಾಕ್ಷಿದಾರರಿಗೆ ನೋಟಿಸ್ ನೀಡಿ ಕಚೇರಿಗೆ ಕರೆಸಿರುತ್ತೇನೆ. ಚಾಸಾ 02 ರವರು ಮಹಜರ್ ಸಮಯದಲ್ಲಿ ಹಾಜರಿದ್ದು ವಾಹನವನ್ನು ಗುರುತಿಸಿರುತ್ತಾರೆ. ಚಾಸಾ 02 ಮತ್ತು 18 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ಸಿಬ್ಬಂದಿಯವರಾದ ಚಾಸಾ 32 ರಿಂದ 38 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ.

ದಿಃ 08.03.2025 ರಂದು ಮೃತ ಪುನೀತನು ಕೃತ್ಯ ನಡೆದ ಸಮಯದಲ್ಲಿ ಧರಿಸಿದ ಬಟ್ಟೆಗಳನ್ನು ಹಾಜರುಪಡಿಸುವಂತೆ ಚಾಸಾ 34 ರವರು ನೇಮಿಸಿದ್ದು, ಅವರು

ಆಸ್ಪತ್ರೆಯಿಂದ ಬಟ್ಟೆಗಳನ್ನು ಸ್ವೀಕರಿಸಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಚಾಸಾ 15 ಮತ್ತು 16 ರವರ ಸಮಕ್ಷಮ ಸದರಿ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿದ್ದು, ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮಹಜರ್ ಅನ್ನು ನಿಪಿ 25 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 25(ಡಿ) ಎಂದು ಗುರುತಿಸಲಾಯಿತು. ಮಹಜರ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಭಾವಚಿತ್ರಗಳನ್ನು ನಿಪಿ 26 ರಿಂದ 29 ಎಂದು ಈಗಾಗಲೇ ಗುರುತಿಸಲಾಗಿದೆ. ಬಟ್ಟೆಗಳನ್ನು ಮು.ಮಾ 4 ಮತ್ತು 5 ಎಂದು ಈಗಾಗಲೇ ಗುರುತಿಸಲಾಗಿದೆ. ಮಹಜರ್ ಅನ್ನು ಮದ್ಯಾಹ್ನ 1.30 ರಿಂದ 2.00 ಗಂಟೆಯವರೆಗೆ ಬರೆದಿರುತ್ತೇನೆ. ಚಾಸಾ 1 ರವರಿಗೆ ಚೆನ್ನಮ್ಮ ಲಾಡ್ಜ್ ನ ಗ್ರಾಹಕರ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟಿಸ್ ನೀಡಿದ್ದು ಅವರು ಲಾಡ್ಜ್ ನ ಗ್ರಾಹಕರ ಬಗ್ಗೆ ಇಟ್ಟಿದ್ದ ಲೆಡ್ಜರ್ ಬುಕ್ ಅನ್ನು ಹಾಜರುಪಡಿಸಿದ್ದು ಅದನ್ನು ಚಾಸಾ 15 ಮತ್ತು 16 ರವರು ಸಮಕ್ಷಮ ಸಂಜೆ 5.30 ರಿಂದ 6.00 ಗಂಟೆ ಸಮಯದಲ್ಲಿ ಮಹಜರ್ ಬರೆದು ಅಮಾನತ್ತುಪಡಿಸಿಕೊಂಡಿರುತ್ತೇನೆ. ಚಾಸಾ 43 ರವರು ಮಹಜರ್ ವಿಚಾರಗಳನ್ನು ಬರೆದಿರುತ್ತಾರೆ. ಲಾಡ್ಜ್ ಪುಸ್ತಕವನ್ನು ನಿಪಿ 30 ಎಂದು, ಈಗಾಗಲೇ ಗುರುತಿಸಲಾಗಿದೆ. ಮಹಜರ್ ಅನ್ನು ನಿಪಿ 31 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 31(ಸಿ) ಎಂದು ಗುರುತಿಸಲಾಯಿತು. ಮಹಜರ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಭಾವಚಿತ್ರಗಳನ್ನು ನಿಪಿ 32 ಮತ್ತು 33 ಎಂದು ಈಗಾಗಲೇ ಗುರುತಿಸಲಾಗಿದೆ. ನಿಪಿ 30 ರ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿ ಸಲ್ಲಿಸಿರುತ್ತೇನೆ. ಚಾಸಾ 1 ಮತ್ತು 4 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ.

ದಿಃ 09.03.2025 ರಂದು ಸಾಕ್ಷಿದಾರರಾದ ಚಾಸಾ 5 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

ದಿಃ 10.03.2025 ರಂದು ಸಾಕ್ಷಿದಾರರ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ.

ದಿಃ 12.03.2025 ರಂದು ಚಾಸಾ 40 ರವರಿಗೆ ಮೃತ ಪುನೀತ್ ಗೆ ಸಂಬಂಧಿಸಿದಂತೆ ಎಂ.ಎಲ್.ಸಿ ಯನ್ನು ಆಸ್ಪತ್ರೆಯಿಂದ ಪಡೆದುಕೊಳ್ಳಲು ಆದೇಶಿಸಿದ್ದು ಅದರಂತೆ ಅವರು ಮೃತ ಪುನೀತ್ ನ ಎಂ.ಎಲ್.ಸಿ ದಾಖಲಾತಿಯನ್ನು ಆಸ್ಪತ್ರೆಯಿಂದ ಪಡೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ದಾಖಲಾತಿಯನ್ನು ನಿಪಿ 34 ಮತ್ತು 36 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 34(ಬಿ) ಎಂದು ಗುರುತಿಸಲಾಯಿತು.

ದಿಃ 13.03.2025 ರಂದು ಸಾಕ್ಷಿದಾರರಾದ ಚಾಸಾ 6 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

ದಿಃ 15.03.2025 ರಂದು ಚಾಸಾ 40 ರವರು ಆಸ್ಪತ್ರೆಯಿಂದ ಮೃತನ ವಿಸರ ಮತ್ತು ಪಿ.ಎಂ ವರದಿಯನ್ನು ಹಾಜರುಪಡಿಸಿದ್ದು, ಸ್ವೀಕರಿಸಿ, ವಿಸರ ಬಗ್ಗೆ ನ್ಯಾಯಾಲಯಕ್ಕೆ ಮಾಲುಪಟ್ಟಿ ಸಲ್ಲಿಸಿರುತ್ತೇನೆ. ಪಿ.ಎಂ ವರದಿಯನ್ನು ನಿಪಿ 38 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ 38(ಬಿ) ಎಂದು ಗುರುತಿಸಲಾಯಿತು.

ದಿಃ 17.03.2025 ರಂದು ಸಾಕ್ಷಿದಾರರಾದ ಚಾಸಾ 12 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

ದಿಃ 18.03.2025 ರಂದು ಚಾಸಾ 1 ರಿಂದ 4 ರವರು ನ್ಯಾಯಾಲಯದ ಮುಂದೆ ಹೇಳಿಕೆಗಳನ್ನು ನೀಡಿದ್ದು, ಅವುಗಳನ್ನು ಸ್ವಿಕರಿಸಿರುತ್ತೇನೆ. ಹೇಳಿಕೆಗಳನ್ನು ನಿಪಿ 1 ರಿಂದ 4ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ಚಾಸಾ 40 ರವರ ಮೂಲಕ ಅಮಾನತ್ತುಪಡಿಸಿಕೊಂಡ ಬಾಂಗಿಗಳನ್ನು ಮತ್ತು ವಿಸರವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತೇನೆ. ಚಾಸಾ 40 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

ದಿಃ 21.03.2025 ರಂದು ಮಳವಳ್ಳಿ ಕೋಡಿಪುರ ಗ್ರಾಮಕ್ಕೆ ಬೇಟಿ ನೀಡಿ, ಚಾಸಾ 7 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ನಂತರ ವಡ್ಡರಹಳ್ಳಿ ಗ್ರಾಮಕ್ಕೆ ಬೇಟಿ ನೀಡಿ ಚಾಸಾ 8 ಮತ್ತು 11 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ.

ದಿಃ 27.03.2025 ರಂದು ಅಮಾನತ್ತುಪಡಿಸಿಕೊಂಡ ದ್ವಿ ಚಕ್ರ ವಾಹನದ ಸುಸ್ಥಿತಿಯ ಬಗ್ಗೆ ಚಾಸಾ 28 ರವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ವರದಿಯನ್ನು ನಿಪಿ 55 ಎಂದು, ಸಾಕ್ಷಿ ಸಹಿಯನ್ನು ನಿಪಿ 55(ಎ) ಎಂದು ಗುರುತಿಸಲಾಯಿತು.

ದಿಃ 01.04.2025 ರಂದು ಆರೋಪಿಯ ಮತ್ತು ಚಾಸಾ 12 ರವರ ಮೊಬೈಲ್ ಸಂಖ್ಯೆಗಳ ಸಂಬಂಧ ಕರೆಗಳ ವಿವರಗಳನ್ನು ಸಂಗ್ರಹಿಸುವಂತೆ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತೇನೆ.

ದಿಃ 04.04.2025 ರಂದು ಚಾಸಾ 29 ರವರಿಂದ ದ್ವಿ ಚಕ್ರ ವಾಹನದ ಬಿ ವಹಿ ಪ್ರತಿಯನ್ನು ಪಡೆದಿರುತ್ತೇನೆ. ಪ್ರತಿಯನ್ನು ನಿಪಿ 56 ಎಂದು ಸಾಕ್ಷಿ ಸಹಿಯನ್ನು ನಿಪಿ 56(ಎ) ಎಂದು ಗುರುತಿಸಲಾಯಿತು.

ದಿಃ 08.04.2025 ರಂದು ವಿಧಿವಿಜ್ಞಾನ ಪ್ರಯೋಗಾಲಯದ ವರದಿಯನ್ನು ಪಡೆದಿರುತ್ತೇನೆ. ವರದಿಯನ್ನು ನಿಪಿ 42 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ 42(ಎ) ಎಂದು ಗುರುತಿಸಲಾಯಿತು. ಮತ್ತೊಂದು ವರದಿಯನ್ನು ನಿಪಿ 57 ಎಂದು ಸಾಕ್ಷಿ ಸಹಿಯನ್ನು ನಿಪಿ 57(ಎ) ಎಂದು ಗುರುತಿಸಲಾಯಿತು.

ದಿಃ 15.04.2025 ರಂದು ಮೇಲೆ ಹೇಳಿದ ಆರೋಪಿ ಮತ್ತು ಚಾಸಾ 12 ರವರ ಕರೆಗಳ ವಿವರಗಳನ್ನು ಪಡೆದಿರುತ್ತೇನೆ.

ದಿಃ 16.04.2025 ರಂದು ಮೃತ ಪುನೀತನಿಗೆ ಸಂಬಂಧಿಸಿದಂತೆ ಕೆ.ಆರ್ ಆಸ್ಪತ್ರೆಯಿಂದ ದಾಖಲಾತಿಯನ್ನು ಪಡೆದಿರುತ್ತೇನೆ. ಎಂ.ಎಲ್.ಸಿ ನಿಪಿ 58 ಎಂದು , ಡೆತ್ ಮೆಮೊವನ್ನು ನಿಪಿ 59 ಎಂದು, ಚಿಕಿತ್ಸೆಗಳ ವಿವರಗಳ ದಾಖಲಾತಿಯನ್ನು ನಿಪಿ 60 ಎಂದು ಸಾಕ್ಷಿ ಸಹಿಯನ್ನು ನಿಪಿ 60(ಎ) ಎಂದು ಗುರುತಿಸಲಾಯಿತು.

ದಿಃ 28.04.2025 ರಂದು ಮೃತನ ಮರಣದ ಬಗ್ಗೆ ವೈದ್ಯರಿಂದ ಅಭಿಪ್ರಾಯವನ್ನು ಮತ್ತು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಚಾಕುವನ್ನು ಪರಿಶೀಲಿಸಿ ವರದಿ ನೀಡುವಂತೆ ವೈದ್ಯರಿಗೆ ಕೋರಿ ಪತ್ರ ಬರೆದಿರುತ್ತೇನೆ. ಮನವಿ ಪತ್ರವನ್ನು ನಿಪಿ 61 ಎಂದು ಸಾಕ್ಷಿ ಸಹಿಯನ್ನು ನಿಪಿ 61(ಎ) ಎಂದು ಗುರುತಿಸಲಾಯಿತು.

ದಿಃ 02.05.2025 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಪಡೆದಿರುತ್ತೇನೆ. ನಕಾಶೆಯನ್ನು ನಿಪಿ 37 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ 37(ಬಿ) ಎಂದು ಗುರುತಿಸಲಾಯಿತು.

ದಿಃ 10.05.2025 ರಂದು ಮೇಲೆ ದ್ವಿ ಚಕ್ರ ವಾಹನದ ದಾಖಲಾತಿಗಳನ್ನು ಹಾಜರುಪಡಿಸುವಂತೆ ಅದರ ಮಾಲೀಕರಿಗೆ ಸೂಚನೆ ನೀಡಿರುತ್ತೇನೆ.

ದಿಃ 16.05.2025 ರಂದು ಸಾಕ್ಷಿದಾರರಾದ ಚಾಸಾ 9 ಮತ್ತು 10 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ಅದೇ ದಿನ ಚಾಸಾ 27 ರವರ ಕಚೇರಿಯಿಂದ ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ಪಡೆದಿರುತ್ತೇನೆ. ದಾಖಲಾತಿಯನ್ನು ನಿಪಿ 41 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 41(ಎ) ಎಂದು ಗುರುತಿಸಲಾಯಿತು.

ತನಿಖಾ ಸಮಯದಲ್ಲಿ ಸಿಬ್ಬದಂದಿ ಮೂಲಕ ಭಾವಚಿತ್ರಗಳನ್ನು ತೆಗೆಸಿ ವಿಡಿಯೋ ಚಿತ್ರಿಕರಣ ಮಾಡಿದ್ದು, ಆ ಸಂಬಂಧ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4)

(ಪಿ) ರಂತೆ ದೃಡಿಕರಣವನ್ನು ಪಡೆದಿರುತ್ತೇನೆ. ದೃಢಿಕರಣವನ್ನು ನಿಪಿ 62 ಮತ್ತು 63 ಎಂದು, ಸಾಕ್ಷಿ ಸಹಿಗಳನ್ನು ನಿಪಿ 62(ಎ) ಮತ್ತು 63(ಎ) ಎಂದು ಗುರುತಿಸಲಾಯಿತು.

ದಿಃ 21.05.2025 ರಂದು ವೈದರಿಂದ ಅಂತಿಮ ಅಭಿಪ್ರಾಯವನ್ನು ಪಡೆದಿರುತ್ತೇನೆ. ಅಂತಿಮ ಅಭಿಪ್ರಾಯವನ್ನು ನಿಪಿ 39 ಮತ್ತು 40 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಗಳನ್ನುನಿ ಪಿ 39(ಬಿ) ಮತ್ತು 40(ಬಿ) ಎಂದು ಗುರುತಿಸಲಾಯಿತು. ಅದೇ ದಿನ ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೊ.ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಭಾವಚಿತ್ರಗಳು ಮತ್ತು ವಿಡಿಯೋ ಚಿತ್ರಿಕರಣದ ಸಂಬಂಧ ಸಿಡಿಗಳನ್ನು ನಿಪಿ 64 ರಿಂದ 66 ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಚಾಕುವನ್ನು ಮು.ಮಾ 3 ಎಂದು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲುಃ– ಶ್ರೀ ಸಿ.ಆರ್ ವಕೀಲರಿಂದ**

ಮೃತ ಪುನೀತನು ಯಾವ ಗ್ರಾಮದವನು, ಆತನ ಪೋಷಕರು ಯಾರು ಮತ್ತು ಆತನ ವೃತ್ತಿ ಏನು ಎಂಬುದರ ಬಗ್ಗೆ ಮಾಹಿತಿ ಪಡೆದಿರುತ್ತೇನೆ. ಆ ಬಗ್ಗೆ ದಾಖಲಾತಿಗಳು ದೊರೆತಿರುವುದಿಲ್ಲ. ಮೃತನ ಹೆಂಡತಿ ಮತ್ತು ಮಗ ರಾಮನಗರದಲ್ಲಿ ಮಾಹಿತಿ ಬಂದಿದ್ದು ಪೂರ್ಣ ವಿವರಗಳು ದೊರೆಯಲಿಲ್ಲ. ಚಾಸಾ 19 ರವರಿಂದ ಮೃತನ ಬಗ್ಗೆ ವಿವರಗಳು ದೊರೆತಿರುತ್ತವೆ. ಮೃತನು ಆತನ ತಂದೆಗೆ ಒಬ್ಬನೇ ಮಗನಾಗಿದ್ದನು. ಮೃತನ ತಂದೆ ತಾಯಿ ಮೃತಪಟ್ಟಿದ್ದರು. ನಾನು ತಹಸೀಲ್ದಾರರವರಿಂದ ಮೃತನ ವಾರಸ್ಸುದಾರರ ದೃಢಿಕರಣವನ್ನು ಪಡೆದಿರುವುದಿಲ್ಲ.

ಮೃತನು ತಾನು ಮೃತಪಡುವುದಕ್ಕೆ 2 ವರ್ಷದಿಂದ ಚೆನ್ನಮ್ಮ ಲಾಡ್ಜ್ ನಲ್ಲಿ ಇದ್ದನು. ಮೃತನು ನಿರಂತರವಾಗಿ ಲಾಡ್ಜ್ ನಲ್ಲಿ ಇರುತ್ತಿರಲಿಲ್ಲ ಆತ ಬೇರೆ ಕಡೆ ಕೆಲಸ ಇದ್ದಾಗ ಅಲ್ಲಿಗೆ ಹೋಗುತ್ತಿದ್ದನು ನಂತರ ಲಾಡ್ಜ್ ಗೆ ಬರುತ್ತಿದ್ದನು.

ದಿಃ 04.03.2025 ರಂದು ಮೃತನು ಲಾಡ್ಜ್ ನಲ್ಲಿ ಇದ್ದ ಬಗ್ಗೆ ನಿಪಿ 30 ರಲ್ಲಿ ದಿಃ 29.12.2023 ರಿಂದ ಮೃತನು ದಿನಕ್ಕೆ 200 ರೂ ರಂತೆ ಬಾಡಿಗೆ ಮಾತನಾಡಿಕೊಂಡು ಲಾಡ್ಜ್ ಕೊಠಡಿ ಸಂಖ್ಯೆ 7 ರಲ್ಲಿ ಇದ್ದನು ಆಗಾಗ ಹೊರಗೆ ಹೋಗಿ ಬರುವುದನ್ನು ಮಾಡುತ್ತಿದ್ದನು ಎಂದು ಚಾಸಾ 1 ರವರು ಹೇಳಿಕೆ ಕೊಟ್ಟಿರುತ್ತಾರೆ. ದಿಃ 04.03.2025 ರಂದು ಮೃತನು ರೂಮಿನಲ್ಲಿ ಇದ್ದನು ಎಂಬುದಕ್ಕೆ ನಿಪಿ 30 ರಲ್ಲಿ ನಮೂದಾಗಿರುವುದಿಲ್ಲ. ಚಾಸಾ 1 ರವರು ಆ ದಿನ ರೂಮಿನಲ್ಲಿ ಇದ್ದನು ಎಂದು ಹೇಳಿಕೆ ನೀಡಿರುತ್ತಾರೆ. ಆ ದಿನ ಅಂದರೆ 04.03.2025 ರಂದು ಸದರಿ ಲಾಡ್ಜ್ ನಲ್ಲಿ ನಿಖರವಾಗಿ ಎಷ್ಟು ಜನ ಇದ್ದರು ಎಂಬುದಕ್ಕೆ ಮಾಹಿತಿ ದೊರೆತಿರುವುದಿಲ್ಲ. ನಿಪಿ 30 ರಲ್ಲಿ ದಿಃ 30.12.2023 ಕ್ಕೆ ಕೊನೆಯದಾಗಿ ನಮೂದು ಮಾಡಲಾಗಿದ್ದು ನಂತರದಲ್ಲಿ ಯಾವುದೇ ವಿವರಗಳು ಇರುವುದಿಲ್ಲ. ನಿಪಿ 30 ಅನ್ನು ಈ ಪ್ರಕರಣಕ್ಕೆಂದು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಮೃತನು ಚೆನ್ನಮ್ಮ ಲಾಡ್ಜ್ ನಲ್ಲಿ ಯಾವತ್ತೂ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಚೆನ್ನಮ್ಮ ಲಾಡ್ಜ್ ನವರು ಮೃತನಿಗೆ ಹಣ ಪಡೆದಿದ್ದಕ್ಕೆ ಯಾವುದೇ ರಶೀದಿಯನ್ನು ನೀಡುತ್ತಿರಲಿಲ್ಲ. 2023 ರ ನಂತರ ಲೆಡ್ಜರ್ ಪುಸ್ತಕದ ಬಗ್ಗೆ ಬಾಡಿಗೆ ರಶೀದಿ ಬಗ್ಗೆ ಚಾಸಾ 1 ರವರನ್ನು ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿರುವುದಿಲ್ಲ. ವಾಹನ ಸಂಖ್ಯೆ **KA04EK6042** ಅನ್ನು ಆರೋಪಿ ಉಪಯೋಗಿಸುತ್ತಿದ್ದನು ಎಂಬುದಕ್ಕೆ ಸಾಕ್ಷಿದಾರರಾದ ಚಾಸಾ 2 ಮತ್ತು 3 ರವರು ಹೇಳಿಕೆ ಕೊಟ್ಟಿರುತ್ತಾರೆ. ಸದರಿ ವಾಹನದ ಮೂಲಕ ಮಾಲೀಕರು ವಿಳಾಸದಲ್ಲಿ ಇರಲಿಲ್ಲ. ವಾಹನದ ಬಗ್ಗೆ ಆರೋಪಿಯ ಬಳಿ ಯಾವುದೇ ದಾಖಲಾತಿಗಳು ಇರಲಿಲ್ಲ. ಚಾಸಾ 32 ಮತ್ತು 33 ರವರು ಆರೋಪಿ ವಾಸ ಮಾಡುತ್ತಿದ್ದ ಮೈಸೂರಿನ ದೇವಯ್ಯನ ಹುಂಡಿ ಗ್ರಾಮದಲ್ಲಿರುವ ಮನೆಯಿಂದ ಸದರಿ ವಾಹನವನ್ನು ವಶಕ್ಕೆ ಪಡೆದು ಹಾಜರುಪಡಿಸಿರುತ್ತಾರೆ. ಆರೋಪಿಯು ಮೈಸೂರಿನಲ್ಲಿ ವಾಸಿಸುತ್ತಿದ್ದ ಮನೆಯ ಬಗ್ಗೆ ವಿವರಗಳನ್ನು ನಾನು ಪಡೆದಿರುವುದಿಲ್ಲ. ಆರೋಪಿಯು ಮೈಸೂರಿನ ವಿಳಾಸದ ಮನೆಯಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಮನೆಯ ಅಕ್ಕಪಕ್ಕದ ಮನೆಗಳ ನಿವಾಸಿಗಳನ್ನು ವಿಚಾರಣೆ ಮಾಡಿರುವುದಿಲ್ಲ. ಆ ಸಮಯದಲ್ಲಿ ಆರೋಪಿ ಬಂಧನದಲ್ಲಿದ್ದನು. ನ್ಯಾಯಾಲಯದಿಂದ ಅನುಮತಿ ಪಡೆದು ಆರೋಪಿಯೊಂದಿಗೆ ವಿಚಾರಣೆ ಮಾಡಲು ಪ್ರಯತ್ನಪಟ್ಟಿರುವುದಿಲ್ಲ. ಮೇಲೆ ಹೇಳಿದ ದ್ವಿ ಚಕ್ರ ವಾಹನ ನಮ್ಮ

ಠಾಣೆಯ ಬೇರೆ ಮೊಕದ್ದಮೆ ವಾಹನ ಎಂದರೆ ಸರಿಯಲ್ಲ. ಸದರಿ ವಾಹನ ಯಾವತ್ತೂ ಆರೋಪಿಯ ವಶದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮಹಜರ್ ಸಾಕ್ಷಿದಾರರಿಗೆ ನೋಟಿಸ್ ಕೊಟ್ಟಿರುತ್ತೇನೆ. ಈ ಪ್ರಕರಣದಲ್ಲಿ ಎಲ್ಲಾ ಮಹಜರ್ ಗಳನ್ನು ನಾನು ಸೃಷ್ಟಿ ಮಾಡಿದ್ದೇನೆ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಸ್ಥಳ ಮಹಜರ್ ಅನ್ನು ಸಹಾ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಹೊಸ ಚಾಕುವನ್ನು ಈ ಪ್ರಕರಣಕ್ಕೆ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯಿಂದ ಮೊಬೈಲ್ ಅನ್ನು ಅಮಾನತ್ತುಪಡಿಸಿಕೊಂಡಾಗ ಮಹಜರ್ ಬರೆಯಲಾಗಿದೆಯೋ ಇಲ್ಲವೋ ಗೊತ್ತಿಲ್ಲ. ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ಸಾಕ್ಷಿದಾರರು ಯಾವುದೇ ಹೇಳಿಕೆಗಳನ್ನು ನೀಡಿಲ್ಲ, ಎಲ್ಲಾ ಹೇಳಿಕೆಗಳನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರ ತೆಗೆದ ಕ್ಯಾಮೆರಾ/ ಮೊಬೈಲ್ ಚಿಪ್ ಅನ್ನು ಹಾಜರುಪಡಿಸಿರುವುದಿಲ್ಲ. ನಾನು ಯಾವುದೇ ಕರೆಗಳ ವಿವರಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಾಗಲೀ ಮೃತನಿಗಾಗಲೀಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಶವ ಪಂಚನಾಮೆ ಮತ್ತು ಶವ ಪರೀಕ್ಷೆ ಮಾಡಿದ ಶವ ಪುನೀತ ಎಂಬ ವ್ಯಕ್ತಿಯದಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ತನಿಖೆಗೆಂದು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ, ಆತನ ವಿರುದ್ಧ ಸುಳ್ಳು ದೊ.ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದೊ.ಪಟ್ಟಿಯಲ್ಲಿ ಹೇಳಿರುವ ಘಟನೆ ಚೆನ್ನಮ್ಮ ಲಾಡ್ಜ್ ನಲ್ಲಿ ನಡೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ